ಓ.ಎಸ್.ನಂಃ 71/2021
ಪಿ.ಡಬ್ಲ್ಯೂಃ 1

<u>ದಿನಾಂಕಃ 26-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ-</u>

ಈ ದಾವೆಯ ವಾದಿ ಸರಿತ ನನ್ನ ಸೊಸೆ ಇರುತ್ತಾಳೆ. ನಾನು ವಾದಿಯ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನ ಬಾಬ್ತು ನೊಂದಣಿ ವಿಚಾರದಲ್ಲಿ ಈ ದಾವೆಯನ್ನು ಸಲ್ಲಿಸಲಾಗಿರುತ್ತದೆ. ದಾವಾ ಸ್ವತ್ತಿನ ಸರ್ವೆ ನಂ.571/8 ಇರುತ್ತದೆ. ಸದರಿ ದಾವಾ ಸ್ವತ್ತಿನ ವಿಸ್ತೀರ್ಣ ಒಂದು ಗುಂಟೆಯಾಗಿದ್ದು ಅದು 8 ಖರಾಬು ಇರುತ್ತದೆ. ಸದರಿ ದಾವಾ ಸ್ವತ್ತು ಇಂದಾವರ ಗ್ರಾಮದಲ್ಲಿ ಇರುತ್ತದೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನನ್ನ ಸೊಸೆ ನನಗೆ ಜಿ.ಪಿ.ಎ ಮಾಡಿಕೊಟ್ಟಿದ್ದು ನಿರ್ದಿಷ್ಟವಾದ ದಿನಾಂಕವನ್ನು ಹೇಳಲು ನನಗೆ ಈಗ ನೆನಪಿಲ್ಲ. ದಾವಾ ಸ್ವತ್ತಿನ ಹಿಂಭಾಗದಲ್ಲಿ ನನ್ನ ಸೊಸೆಯ ಹೆಸರಿನಲ್ಲಿ ಬೇರೆ ಆಸ್ತಿ ಇರುತ್ತದೆ. ಸದರಿ ಸ್ವತ್ತಿನ ಬಾಬ್ತು ಕೇಳದೆ ಇದ್ದುದರಿಂದ ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿನ ಅಕ್ಕಪಕ್ಕ ನನ್ನ ಸೊಸೆಯ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-3 ರಿಂದ ನಿಪಿ-8 ಪಹಣಿ ಪತ್ರಿಕೆಗಳು ನನ್ನ ಸೊಸೆಯ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ಅದು ನಮ್ಮ ಜಂಟಿ ಕುಟುಂಬದ ಆಸ್ತಿ ಇದ್ದು ನನ್ನ ಹೆಂಡತಿ ಹೆಸರಿನಲ್ಲಿ ಕೂಡಾ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಸೊಸೆ ಈಗ ಆಕೆಯ ಊರಾದ ರಾಜಸ್ಥಾನಕ್ಕೆ ಹೋಗಿರುತ್ತಾಳೆ. ನನ್ನ ಸೊಸೆಗೆ ಡೆಲಿವರಿ ಆಗಿದ್ದುದರಿಂದ ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಆಕೆ ಇಲ್ಲಿ ಇರಲಿಲ್ಲ. ನಿಪಿ-9 ನೋಟೀಸ್ ಅನ್ನು ಯಾವ ದಿನಾಂಕದಂದು

ನೀಡಲಾಗಿರುತ್ತದೆ ಎಂದು ಈಗ ಹೇಳಲು ನನಗೆ ನೆನಪಿಲ್ಲ. ಸದರಿ ನೋಟೀಸ್ ಅನ್ನು ನೀಡುವ ಸಮಯದಲ್ಲಿ ಆಕೆ ಡೆಲಿವರಿಗಾಗಿ ಹೋಗಿದ್ದಳು. ನಿಪಿ-9 ನೋಟೀಸ್ ಗೂ ಹಾಗೂ ವಾದಿಯಾದ ನನ್ನ ಸೊಸೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ನೊಂದಣಿ ಮಾಡಿಕೊಡುವಂತೆ ಕೇಳಿಕೊಂಡಿರುತ್ತೇವೆ. ಸದರಿ ನೋಟೀಸ್ ಅನ್ನು ನೀಡುವ ಪೂರ್ವದಲ್ಲಿ ನಿಪಿ-12 ಕ್ರಯದ ಕರಾರು  ಪತ್ರವನ್ನು ತಯಾರಿಸಲು Stamp Paper ಅನ್ನು ಇಂದ್ರೇಷ್ ಮತ್ತು ವಿಷ್ಣುರವರು ತಂದಿದ್ದರು. ದಿಃ27.12.2016 ರಂದು ಸದರಿ Stamp Paper ಅನ್ನು ತಂದಿದ್ದರು. ಸದರಿ Stamp Paper ಅನ್ನು ಪ್ರತಿವಾದಿ ನಂ.1 ಮತ್ತು 2 ರವರು ತಂದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಸದರಿ Stamp Paper ಅನ್ನು ಅವರೇ ತಂದು ಬರೆಸಿರುತ್ತಾರೆ. ಸದರಿ ಕ್ರಯದ ಕರಾರು ಪತ್ರ ದಿಃ27.12.2016 ರಂದು ಆಗಿರುತ್ತದೆ. 1 ಮತ್ತು 2 ನೇ ಪ್ರತಿವಾದಿಯರು ನಮ್ಮನ್ನು ತಾಲ್ಲೂಕು ಕಛೇರಿಯ ಹತ್ತಿರ ಕರೆಸಿದ್ದರು. ಸದರಿ ದಿನ ವಾದಿ ಹಾಗೂ ನಾನೂ ಕೂಡಾ ಅಲ್ಲಿ ಇದ್ದೆನು.

ನಿಪಿ-12 ಕ್ರಯದ ಕರಾರು ಪತ್ರವನ್ನು ನಾನು ಬೇರೆಯವರಿಂದ ಓದಿಸಿ ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ-12  ಕ್ಕೆ ಸಾಕ್ಷಿದಾರರನ್ನಾಗಿ 1  ಮತ್ತು 2 ನೇ ಪ್ರತಿವಾದಿಯರು ಕರೆದುಕೊಂಡು ಬಂದಿದ್ದು ಸದರಿ ಸಾಕ್ಷಿದಾರರ ಹೆಸರು ನೀಲೇಶ್ ಕುಮಾರ್ ಮತ್ತು ಅಮೃತ್ ಲಾಲ್ ಎಂದು ಇರುತ್ತದೆ. ಸದರಿ ಸಾಕ್ಷಿದಾರರು ನನ್ನ  ಸಮಕ್ಷಮದಲ್ಲಿಯೇ ಸಹಿಯನ್ನು ಹಾಕಿರುತ್ತಾರೆ. ನಾನು ಸಹಿಯನ್ನು ಹಾಕಿದ್ದೆನೆಯೋ ಇಲ್ಲವೋ ಎಂದು ಹೇಳಲು ನನಗೆ ನೆನಪಿಲ್ಲ. ಸಾಕ್ಷಿದಾರರಿಗೆ ನಿಪಿ-12 ನ್ನು ತೋರಿಸಿ ಕೇಳಲಾಗಿ ಅದರಲ್ಲಿ ನನ್ನ ಸಹಿ

ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-12 ರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸೊಸೆಯ ಪರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-12 ನ್ನು ನೊಂದಣಿ ಮಾಡಿಸಿರುವುದಿಲ್ಲ. ಆದರೆ, ಈ ಬಗ್ಗೆ ನಂತರ ಹಣವನ್ನು ಕಟ್ಟಿರುತ್ತೇವೆ. ಸದರಿ ದಿನ ನಾವು ಸದರಿ ಕ್ರಯ ಕರಾರು ಪತ್ರವನ್ನು ನೋಟರಿ ಮಾಡಿಸಿರುವುದಿಲ್ಲ.

ಸದರಿ ಕ್ರಯ ಕರಾರು ಪತ್ರದಲ್ಲಿ ಹಾಕಿರುವ ಷರತ್ತುಗಳ ಬಗ್ಗೆ ನನಗೆ ತಿಳಿದಿರುತ್ತದೆ. ಸದರಿ ದಾವಾ ಸ್ವತ್ತಿನ ಬಾಬ್ತು ಇದ್ದ ಖರಾಬನ್ನು ಸರಿ ಮಾಡಿಕೊಡುತ್ತೇನೆ ಎಂದು ಮತ್ತು ತಂತಿ ಬೇಲಿ ಹಾಕಿಕೊಡುತ್ತೇವೆಂದು ಹಾಗೂ ಲೆವೆಲ್ ಮಾಡಿಕೊಡುತ್ತೇವೆ ಎಂದು ಅದರಲ್ಲಿ ನಮೂದು ಮಾಡಿರುತ್ತಾರೆ. ಈ ಬಗ್ಗೆ ನಿಪಿ-12 ರಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-12 ರಲ್ಲಿ ಸದರಿ ಜಾಗದ ಖರಾಬನ್ನು ಸರಿ ಮಾಡಿಕೊಟ್ಟು ನಂತರ ಲೆವೆಲ್ ಮಾಡಿ ತಂತಿಬೇಲಿ ಹಾಕಿಕೊಟ್ಟ ನಂತರ ನೊಂದಣಿ ಮಾಡಿಕೊಡುತ್ತೇವೆ ಎಂದು ತಿಳಿಸಲಾಗಿರುತ್ತದೆ. ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿರುತ್ತೇನೆ. ಸದರಿ ಕ್ರಯಪತ್ರವನ್ನು ಎಷ್ಟು ಸಮಯದ ಒಳಗೆ ಮಾಡಿಕೊಡುತ್ತೇವೆ ಎಂದು ನಿಪಿ-12 ರಲ್ಲಿ ನಮೂದು ಮಾಡಿರುತ್ತಾರೆ ಎನ್ನುವ ಬಗ್ಗೆ ನನಗೆ ಹೇಳಲು ಈಗ ಆಗುವುದಿಲ್ಲ. ಈ ವ್ಯವಹಾರದ ಬಾಬ್ತು ನಾನೇ ಎಲ್ಲಾ ನೋಡಿಕೊಂಡಿರುತ್ತೇನೆ ಎಂದರೆ ಸರಿ.

ಕ್ರಯದ ಕರಾರು ಪತ್ರವನ್ನು ಮಾಡುವ ಮೊದಲು ನಮ್ಮ ವಕೀಲರ ಬಳಿ ಅಭಿಪ್ರಾಯವನ್ನು ಪಡೆದಿರುವುದಿಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಪ್ರತಿವಾದಿಯರೇ ಈ ಬಗ್ಗೆ ನಮಗೆ ನಂಬಿಕೆಯನ್ನು ಮಾಡಿಸಿರುತ್ತಾರೆ. ನಿಪಿ-9

ನೋಟೀಸ್ ಅನ್ನು ಯಾವ ದಿನಾಂಕದಂದು ನೀಡಲಾಗಿರುತ್ತದೆ ಎಂದು ಹೇಳಲು ನನಗೆ ಈಗ ನೆನಪಿಲ್ಲ. ದಿಃ12.03.2020 ರಂದು ನಾವು ನೋಟೀಸ್ ಅನ್ನು ನೀಡಿರುತ್ತೇವೆ ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ನಡುವೆ 1 ಮತ್ತು 2 ನೇ ಪ್ರತಿವಾದಿಯರು ಚೆಕ್ ಮೂಲಕ ಹಣವನ್ನು 2 ಬಾರಿ ಪಡೆದುಕೊಂಡು ಹೋಗಿದ್ದರು. ಸದರಿ ಪ್ರತಿವಾದಿಯರು ಒಂದು ಬಾರಿ 20 ಸಾವಿರ ಹಾಗೂ ಎರಡನೇ ಬಾರಿ 50 ಸಾವಿರ ಹಣವನ್ನು ಕೆಲಸ ಮಾಡಲು ಹಣ ಬೇಕು ಎಂದು ಹೇಳಿ ಚೆಕ್ ಮೂಲಕ ತೆಗೆದುಕೊಂಡು ಹೋಗಿದ್ದರು. ಆದರೆ ಯಾವ ದಿನಾಂಕಂದು ಹೇಳಲು ಈಗ ನನಗೆ ಆಗುವುದಿಲ್ಲ. ಸದರಿ ಚೆಕ್ ಗಳನ್ನು ನನ್ನ ಸೊಸೆ ಹೇಳಿದ ನಂತರ ನಾನು ಕೊಟ್ಟು ಕಳುಹಿಸಿರುತ್ತೇನೆ. ಆ ಸಮಯದಲ್ಲಿ ನನ್ನ ಸೊಸೆ ನಮ್ಮ ಮನೆಯಲ್ಲಿಯೇ ಇದ್ದಳು.

ನಿಪಿ-12 ಕ್ರಯದ ಕರಾರು ಪತ್ರದಲ್ಲಿ ಇರುವ ಸಹಿ ನನ್ನ ಸೊಸೆಯದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ-12 ರ ಕೊನೆಯ ಪುಟದಲ್ಲಿ 1 ನೇ ಪ್ರತಿವಾದಿ ಇಂದ್ರೇಷ್ ರವರು ಬರವಣಿಗೆ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಸೊಸೆ ಇಬ್ಬರು ಇದ್ದೆವು. ಯಾವ ಕಾರಣಕ್ಕಾಗಿ ಸದರಿ ಮುಂಗಡ 20 ಸಾವಿರ ಪಡೆದುಕೊಂಡಿರುತ್ತೇವೆ ಎಂದು ಅದರಲ್ಲಿ ನಮೂದು ಮಾಡಿರುವುದಿಲ್ಲ. ಆದರೆ, ಸದರಿ ಹಣವು ಖರಾಬು ಬಗ್ಗೆ ಸರಿ ಮಾಡಲು ಪ್ರತಿವಾದಿಯರು ತೆಗೆದುಕೊಂಡಿರುತ್ತಾರೆ. ಅದೇ ಪುಟದಲ್ಲಿ ದಿಃ24.08.2018 ರಲ್ಲಿ ಮಾಡಿದ ಬರವಣಿಗೆಯನ್ನೂ ಕೂಡಾ 1 ನೇ ಪ್ರತಿವಾದಿಯೇ ಮಾಡಿರುತ್ತಾರೆ. ಆ ಸಮಯಲ್ಲಿಯೂ ಕೂಡಾ ನಾನು ಮತ್ತು ನನ್ನ ಸೊಸೆ ಇದ್ದೆವು. ಸದರಿ ಬರವಣಿಗೆಗಳಿಗೆ ನಾನು ಮತ್ತು ನನ್ನ ಸೊಸೆ ಸಹಿ ಹಾಕಿರುವುದಿಲ್ಲ. ಸಾಕ್ಷಿದಾರರು

ಮುಂದುವರಿದು ನುಡಿಯುತ್ತಾರೆ 1 ಮತ್ತು 2 ನೇ ಪ್ರತಿವಾದಿಯರು ಹಣವನ್ನು ಪಡೆದುಕೊಂಡಿದ್ದುದರಿಂದ ಅವರು ಮಾತ್ರ ಸಹಿಯನ್ನು ಹಾಕಿರುತ್ತಾರೆ. ನಿಪಿ-12 ರ 5 ನೇ ಪುಟದ ನಂತರದ ಪುಟವನ್ನು ಈ ಕೇಸಿಗಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪುಟವು ನಿಪಿ-12 ಕ್ಕೆ ಸಂಬಂಧಪಟ್ಟದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ-12 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕೊನೆಯ ಪುಟವನ್ನು ಈ ಕೇಸಿಗಾಗಿ ಸೃಷ್ಟಿಸಿ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿಪಿ-12 ರ ಕೊನೆಯ ಪುಟದಲ್ಲಿ ಮಾಡಿದ ಬರವಣಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟದ್ದು ಅಲ್ಲ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ